ಮುಂಡಗೋಡ ತಾಲ್ಲೂಕಿನ ನಂದಿಕಟ್ಟೆ PHC

554 (295) ಶ್ರೀ ಪಾಟೀಲ್ ಎ. ಎಸ್. (ಯಲ್ಲಾಪುರ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಂಡಗೋಡ ತಾಲ್ಲೂಕು ನಂದಿಕಟ್ಟಾ ಗ್ರಾಮ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಸರಕಾರವು ಮಂಜೂರಾತಿ ನೀಡಿದೆಯೇ;

ಆ) ಈ ಕಟ್ಟಡಕ್ಕೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿ ಮಂಜೂರಾತಿ ನೀಡಿ ಟೆಂಡರ್ ಕರೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಸರ್ಕಾರದ ಆದೇಶ ಸಂಖ್ಯೆ: ಆಕುಕ/443/ಸಿಜೆಎಂ/2007, ದಿನಾಂಕ 04–10–2007 ರಲ್ಲಿ ನಂದಿಘಟ್ಟಾ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗಿತ್ತು. ಸರ್ಕಾರವು ವಿಧಿಸಿದ್ದ ಷರತ್ತುಗಳನ್ನು ಪೂರೈಸದ ಕಾರಣ, ಸರ್ಕಾರದ ಆದೇಶ ಸಂಖ್ಯೆ: ಆಕುಕ/626/ಸಿಜೆಎಂ/2007, ದಿನಾಂಕ 21–08–2010ರಲ್ಲಿ ಮಂಜೂರಾತಿಯನ್ನು ರದ್ದು ಪಡಿಸಲಾಗಿದೆ.

ಆ) ಬಂದಿದೆ.

ಮಂಜೂರಾತಿಯನ್ನು ರದ್ದುಪಡಿಸಿರುವ ಹಿನ್ನಲೆಯಲಿ ಕಟ್ಟಡ ನಿರ್ಮಿಸಲು ಕರೆದಿದ್ದ ಟೆಂಡರ್ ಅನ್ನು ರದ್ದುಪಡಿಸಲಾಗಿದೆ.

ಸಂತ್ರಸ್ತರಿಗೆ ಉದ್ಯೋಗ ಮತ್ತು ಪರಿಹಾರ ನೀಡುವುದು

555 (599) ಶ್ರೀ ಪಾಟೀಲ್ ಎ. ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಗೆ ಭೂಸ್ವಾಧೀನ ಪಡಿಸಿಕೊಂಡ ರೈತರ ಕುಟುಂಬಕ್ಕೆ ನಿರಾಶ್ರಿತ ಕುಟುಂಬಗಳೆಂದು ಸರ್ಕಾರ ಪರಿಗಣಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಶಾಶ್ವತವಾಗಿ ಭೂಮಿ ಕಳೆದುಕೋಂಡ ರೈತ ಕುಟುಂಬಗಳಿಗೆ